(ಭಾರತೀಯ ಜನತಾ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು.)

**ಅಧ್ಯಕ್ಷರು** :– ಮಾನ್ಯ ರೇವಣ್ಣನವರೆ, ತಮ್ಮ ಸ್ಟೇಟ್‌ಮೆಂಟ್ ಮಾಡಿ.

**ಶ್ರೀ ಬಸವರಾಜ ರಾಯರೆಡ್ಡಿ** :– ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುವುದರಿಂದ, ಧರಣಿ ನಿರತ ಮಾನ್ಯ ಸದಸ್ಯರು ಸದನದ ಬಾವಿಯಿಂದ ನಿರ್ಗಮಿಸಬಹುದು.

**ಶ್ರೀ. ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** (ತಮ್ಮ ಸ್ಥಾನದಿಂದ):– ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತಾರೆ. ಆಮೇಲೆ ಏನಾಗುತ್ತದೋ ನೋಡೋಣ. ದಯವಿಟ್ಟು ಎಲ್ಲಾ ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿ.

**ಅಧ್ಯಕ್ಷರು** :– ಈಗ ಮಾನ್ಯ ಕಾಮಗಾರಿ ಇಲಾಖಾ ಸಚಿವರು ತಮ್ಮ ಸ್ಟೇಟ್‌ಮೆಂಟ್ ನೀಡುತ್ತಾರೆ. ದಯಮಾಡಿ ಎಲ್ಲಾ ಸದಸ್ಯರೂ ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಬೇಕು.

(ಧರಣಿ ನಿರತ ಭಾರತೀಯ ಜನತಾ ಪಕ್ಷದ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿದರು.)

## ಮಂತ್ರಿಗಳ ಹೇಳಿಕೆ

**ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)**:– ಸನ್ಮಾನ್ಯ ಸಭಾ ಅಧ್ಯಕ್ಷರೆ,

ಹಾಸನ ಜಿಲ್ಲೆಗೆ ಸಂಬಂಧಪಟ್ಟಂತೆ ಲೋಕೋಪಯೋಗಿ ಮತ್ತು ಇಂಧನ ಇಲಾಖೆಗಳ ಕಾರ್ಯವೈಖರಿ ಬಗ್ಗೆ ವಿಧಾನ ಸಭೆಯಲ್ಲಿ ಮಾನ್ಯ ಪ್ರತಿಪಕ್ಷದ ಸದಸ್ಯರು ನಡೆಸುತ್ತಿರುವ ಧರಣಿಗೆ ಸಂಬಂಧಪಟ್ಟಂತೆ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಿನಾಂಕ 11ನೇ ಜುಲೈ 2005ರಂದು ನೀಡಿದ ಸ್ವಯಂಪ್ರೇರಿತ ಹೇಳಿಕೆ.

ಅಮೆರಿಕಾದಲ್ಲಿರುವ ಒಕ್ಕಲಿಗರ ಪರಿಷತ್‌ನವರ ಆಹ್ವಾನದ ಮೇರೆಗೆ ಅಮೆರಿಕಾ ಸಂಯುಕ್ತ ಸಂಸ್ಥಾನದ ಡೆಟ್ರಾಯಿಟ್‌ನಲ್ಲಿ ಜುಲೈ ತಿಂಗಳ 1,2 ಮತ್ತು 3ನೇ ದಿನಾಂಕಗಳಂದು ಜರುಗಿದ ಒಕ್ಕಲಿಗರ ಪರಿಷತ್‌ನ 9ಸಮಾವೇಶ ದಲ್ಲಿ

ಕರ್ನಾಟಕ ಸರ್ಕಾರದ ಪ್ರತಿನಿಧಿಯಾಗಿ ಸರ್ಕಾರದ ಅನುಮೋದನೆಯ ಮೇಲೆ ಭಾಗವಹಿಸಿದ್ದೆನು. ಈ ಸಂದರ್ಭವನ್ನು ಉಪಯೋಗಿಸಿಕೊಂಡು, ಅಮೆರಿಕಾ ದೇಶದಲ್ಲಿ ಕಲ್ಪಿಸಲಾಗಿರುವ ಮೂಲಭೂತ ಸೌಲಭ್ಯಗಳು ಮತ್ತು ಅವುಗಳ ನಿರ್ವಹಣೆಗೆ ಸಂಬಂಧಪಟ್ಟಂತೆ ಅಮೆರಿಕಾದ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ, ಈ ದಿನ, ಅಂದರೆ ದಿನಾಂಕ 11ನೇ ಜುಲೈ 2005ರಂದು ಬೆಳಿಗ್ಗೆ ಬೆಂಗಳೂರಿಗೆ ಹಿಂದಿರುಗಿದ್ದೇನೆ. ಲೋಕೋಪಯೋಗಿ ಮತ್ತು ಇಂಧನ ಇಲಾಖೆಗಳಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಬಗ್ಗೆ ಸಂಪುಟದ ನನ್ನ ಸಹೋದ್ಯೋಗಿಯೊಬ್ಬರು ನೀಡಿರುವರೆನ್ನಲಾದ ಹೇಳಿಕೆಗೆ ಸಂಬಂಧಪಟ್ಟಂತೆ, ಸೂಕ್ತ ತನಿಖೆ ನಡೆಸಲು ಆಗ್ರಹಿಸಿ, ದಿನಾಂಕ 6,7 ಮತ್ತು 8ನೇ ಜುಲೈ 2005ರಂದು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರು ವಿಧಾನ ಸಭೆಯ ಕಲಾಪಗಳನ್ನು ನಡೆಸಲು ಅವಕಾಶ ನೀಡದೆ, ಧರಣಿ, ಪ್ರತಿಭಟನೆ ನಡೆಸಿರುವ ವಿಷಯವು ಮಾಧ್ಯಮಗಳ ಮತ್ತು ನನ್ನ ಇಲಾಖೆಗಳ ಅಧಿಕಾರಿಗಳ ಮೂಲಕ ನನ್ನ ಗಮನಕ್ಕೆ ಬಂದಿರುತ್ತದೆ. ಅಲ್ಲದೆ, ಈ ವಿಷಯದ ಮೇಲೆ ನನ್ನ ಸಹೋದ್ಯೋಗಿಯವರು ಸದನದಲ್ಲಿ ಹೇಳಿಕೆ ನೀಡಿ, ಪತ್ರಿಕೆಗಳಲ್ಲಿ ಪ್ರಕಟವಾದ ವರದಿ ನಿರಾಧಾರ, ಇದರಿಂದ ಲೋಕೋಪಯೋಗಿ ಮತ್ತು ಇಂಧನ ಸಚಿವರಿಗೆ ಅಥವಾ ಯಾವುದಾದರೂ ಸದಸ್ಯರಿಗೆ ನೋವಾಗಿದ್ದರೆ ವಿಷಾದಿಸುವುದಾಗಿ ನೀಡಿರುವ ಹೇಳಿಕೆಯ ಬಗ್ಗೆಯೂ ಸಹ ಮಾಧ್ಯಮಗಳ ಮೂಲಕ ತಿಳಿದುಕೊಂಡಿರುತ್ತೇನೆ. ಬೆಂಗಳೂರಿಗೆ ಹಿಂತಿರುಗಿದ ಕೂಡಲೇ ನಾನು ಲೋಕೋಪಯೋಗಿ ಮತ್ತು ಇಂಧನ ಇಲಾಖೆಗಳ ಅಧಿಕಾರಿಗಳನ್ನು ಕರೆಸಿ ಸಮಾಲೋಚಿಸಿರುತ್ತೇನೆ. ವಿಶೇಷವಾಗಿ ಬಾಕಿ ಬಿಲ್ಲುಗಳ ಪಾವತಿ ಬಗ್ಗೆ ಮಾಡಿರುವ ಆರೋಪಗಳ ಹಿನ್ನೆಲೆಯಲ್ಲಿ, ಈ ಬಾಕಿ ಬಿಲ್ಲುಗಳನ್ನು ಪಾವತಿಸುವಲ್ಲಿ ಅನುಸರಿಸಬೇಕಾದ ಆದ್ಯತೆ ಮತ್ತು ವಿಧಾನಗಳ ಬಗ್ಗೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳೊಡನೆ ಕೂಲಂಕುಷವಾಗಿ ಚರ್ಚಿಸಿದ್ದೇನೆ. ಹಾಗೂ ಬಾಕಿ ಬಿಲ್ಲುಗಳ ಪಾವತಿಗಾಗಿ, ಹಣಕಾಸು ಇಲಾಖೆಯು 'ಹಣ ಭರವಸೆ ಪತ್ರ' [LOC] ಬಿಡುಗಡೆ ಮಾಡುವಾಗ ನೀಡುವ ಸೂಚನೆಗಳ ಬಗ್ಗೆಯೂ ಸಹ ಚರ್ಚಿಸಿದ್ದೇನೆ. ಬಾಕಿ ಬಿಲ್ಲುಗಳ ಪಾವತಿ ಯಲ್ಲಾಗಲೀ ಅಥವಾ ಉಭಯ ಇಲಾಖೆ ಕಾರ್ಯನಿರ್ವಹಣೆ ಯಲ್ಲಾಗಲೀ, ಯಾವುದೇ ಲೋಪ ಅಥವಾ ಭ್ರಷ್ಟಾಚಾರ ನಡೆದಿಲ್ಲವೆಂಬ ಸಂಪೂರ್ಣ ವಿಶ್ವಾಸ ನನಗಿದೆ. ಹಣ ಭರವಸೆ ಪತ್ರಗಳನ್ನು ಆಧರಿಸಿ ಕಾಮಗಾರಿಗಳ ಬಿಲ್ಲುಗಳನ್ನು ತೀರುವಳಿ ಮಾಡುವ ಸಂಪ್ರದಾಯದ ಬಗ್ಗೆ, ಈ

ಹಿಂದೆ ಅನುಸರಿಸಿಕೊಂಡು ಬಂದಿರುವ ನಡವಳಿಗಳ ಬಗ್ಗೆ, ಎಲ್ಲಾ ವಿವರ ಗಳನ್ನು ಸಂಗ್ರಹಿಸಿ, ಕ್ರೋಢಿಕರಿಸಿ, ಮಾಹಿತಿ ಸಿದ್ಧಪಡಿಸಲು ಕಾಲಾವಕಾಶ ಅಗತ್ಯವಿರುತ್ತದೆ. ಮಾನ್ಯ ಸದನವು ಇಚ್ಛಿಸಿದಲ್ಲಿ, ಕಳೆದ 5–6 ವರ್ಷಗಳ ಅವಧಿಯಲ್ಲಿ ಕಾಮಗಾರಿ ಬಿಲ್ಲುಗಳ ತೀರುಗಳಿಗೆ ಸಂಪಂಧಪಟ್ಟಂತೆ; ನಿರ್ದಿಷ್ಟ ಕಾಮಗಾರಿಗೆ, ನಿರ್ದಿಷ್ಟ ಕ್ಷೇತ್ರಕ್ಕೆ, ವಿವಿಧ ಲೆಕ್ಕ ಶೀರ್ಷಿಕೆಗಳಡಿ ಹಣ ಬಿಡುಗಡೆ ಮಾಡುವಂತೆ ಕೋರಿ, ಮಾನ್ಯ ಸಚಿವರುಗಳು, ಶಾಸಕರುಗಳು, ಚುನಾಯಿತ ಪ್ರತಿನಿಧಿಗಳು, ಮುಖಂಡರುಗಳು, ಗುತ್ತಿಗೆದಾರರ ಮತ್ತು ಇತರರು ಮಾಡಿರುವ ಮನವಿಗಳನ್ನು, ಶಿಫಾರಸ್ಸುಗಳನ್ನು ಪುರಸ್ಕರಿಸಿ ಬಿಡುಗಡೆ ಮಾಡಲಾಗಿರುವ ಹಣ ಭರವಸೆ ಪತ್ರಗಳ ಬಗೆಗಿನ ಮಾಹಿತಿ ಯನ್ನು ಒಳಗೊಂಡ ಹೇಳಿಕೆಯನ್ನು ಸದನದಲ್ಲಿ ಮಂಡಿಸಲು ಸಿದ್ಧನಿದ್ದೇನೆ. ಆದರೆ, ಈ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸಿ, ಕ್ರೋಢಿಕರಿಸಲು ಸಾಕಷ್ಟು ಸಮಯಾವಕಾಶ ಅಗತ್ಯವಿರುತ್ತದೆ.

**ಶ್ರೀ ಹೆಚ್.ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು):** (ಮುಂದುವರೆದುದು):–

ಈಗಾಗಲೇ ಹೇಳಿದಂತೆ, ನನ್ನ ಉಸ್ತುವಾರಿಯಲ್ಲಿರುವ ಲೋಕೋಪಯೋಗಿ ಮತ್ತು ಇಂಧನ ಇಲಾಖೆಯ ಕಾರ್ಯನಿರ್ವಹಣೆಯಲ್ಲಿ ಯಾವುದೇ ಲೋಪದೋಷಗಳು ಉಂಟಾಗಿರುವುದಿಲ್ಲ. ನಿಯಮಬಾಹಿರ ಚಟುವಟಿಕೆಗಳು ನಡೆದಿರುವುದಿಲ್ಲ ಎಂಬ ಅಂಶವು ನನ್ನ ಈ ಹೇಳಿಕೆಯಿಂದ ಸದನಕ್ಕೆ ಮನದಟ್ಟಾಗಿದೆಯೆಂದು ಭಾವಿಸುತ್ತೇನೆ.

ನಾನು ಅಧಿಕಾರ ವಹಿಸಿಕೊಂಡಾಗಲಾಯ್ತು, ಅಭಿವೃದ್ಧಿ ಕಾರ್ಯಗಳಿಗೆ ಸಾಧ್ಯವಾದಷ್ಟು ಹೆಚ್ಚಿನ ಚಾಲನೆ ನೀಡುತ್ತಾ ಬಂದಿರುವುದು ತಮಗೆಲ್ಲಾ ತಿಳಿದ ವಿಷಯವೇ ಆಗಿದೆ. ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಯಾವುದೇ ರಾಜಕೀಯಕ್ಕೂ ಅವಕಾಶವಿಲ್ಲದಂತೆ ನಡೆದುಕೊಂಡಿದ್ದೇನೆ.

ಈ ಹಿನ್ನೆಲೆಯಲ್ಲಿ, ನಾನು ಪ್ರಾಮಾಣಿಕವಾಗಿ ನೀಡಿರುವ ಹೇಳಿಕೆಯನ್ನು ಗಮನಿಸಿ, ಹಾಗೂ ನನ್ನ ಸಹೋದ್ಯೋಗಿ ಸಚಿವರು ಈಗಾಗಲೇ ವ್ಯಕ್ತ ಪಡಿಸಿರುವ ವಿಷಾದವನ್ನು ಗಮನಕ್ಕೆ ತೆಗೆದುಕೊಂಡು, ಮಾನ್ಯ ಪ್ರತಿಪಕ್ಷದ ಮುಖಂಡರು ಮತ್ತು ಮಾನ್ಯ ಸದಸ್ಯರುಗಳು ಸದನದ ಕಲಾಪಗಳು ಸುಗಮವಾಗಿ ನಡೆಯಲು ಅನುವು ಮಾಡಿಕೊಡಬೇಕೆಂದು ಕೋರುತ್ತೇನೆ.

**ಶ್ರೀ ಬಿ.ಎಸ್.ಯಡಿಯೂರಪ್ಪ** :– ಮಾನ್ಯ ಅಧ್ಯಕ್ಷರೆ, ಮಾನ್ಯ ಆಲಂಗೂರು ಶ್ರೀನಿವಾಸರವರು ಬಂದಿದ್ದಾರೆ. ಸಾಧ್ಯವಾದರೆ ಅವರಿಂದ ಹೇಳಿಕೆ ಕೊಡಿಸಬೇಕು. ಅವರು ಸ್ಟೇಟ್‌ಮೆಂಟ್ ಮಾಡಲಿ ಆ ನಂತರ ನಾನು ಮಾತನಾಡುತ್ತೇನೆ.

**ಶ್ರೀ ಶ್ರೀನಿವಾಸ್ ಆರ್. (ತೋಟಗಾರಿಕಾ ಸಚಿವರು)** :– ಮಾನ್ಯ ಅಧ್ಯಕ್ಷರೇ, ಏನು ವಿರೋಧ ಪಕ್ಷದ ಸದಸ್ಯರು ನನ್ನ ಬಗ್ಗೆ ಹೇಳಿಕೆ ಕೊಡಬೇಕೆಂದು ಒತ್ತಾಯ ಮಾಡಿದ್ದಕ್ಕೆ ಹೇಳುತ್ತಿದ್ದೇನೆ. ಬಹುಶಃ ಇದು ಸದನದ ಹೊರಗಡೆ ಈ ಟೀಕೆ ಟಿಪ್ಪಣಿಗಳು ರಾಜಕೀಯದಲ್ಲಿ ಕೊಡುವುದು ಸಹಜ. ನಾನು ಏನು ಮಾನ್ಯ ಜಾಲಪ್ಪನವರ ವಿರುದ್ಧ ಮಾಡಿರತಕ್ಕಂತಹ ರಾಜಕೀಯ ಆರೋಪ ವೈಯಕ್ತಿಕ ಅಲ್ಲ, ನನ್ನ ಕ್ಷೇತ್ರದಲ್ಲಿ ನಮ್ಮ ನಾಯಕರನ್ನು ಅಸಭ್ಯವಾಗಿ ಮಾತನಾಡಿರತಕ್ಕಂತಹ ಸಂದರ್ಭದಲ್ಲಿ ಆ ಒಂದು ವೇದಿಕೆಗೂ, ನಮ್ಮ ನಾಯಕರಿಗೂ ಸಂಬಂಧ ಇಲ್ಲದೆ ಇರತಕ್ಕಂತಹ ಸಂದರ್ಭದಲ್ಲಿ ಪ್ರತ್ಯೇಕವಾಗಿ ನಮ್ಮ ಸರ್ಕಾರದ ವಿರುದ್ಧ ನಮ್ಮ ನಾಯಕರ ವಿರುದ್ಧ ಹೇಳಿಕೆಯನ್ನು ದೂಷಣೆಗಳನ್ನು ಮಾಡಿದ್ದಕ್ಕೋಸ್ಕರ ನಾನು ಒಬ್ಬ ಜಿಲ್ಲೆಯ ಮಂತ್ರಿಯಾಗಿ ಅದನ್ನು ಸಮರ್ಥಿಸಬೇಕೆಂದು ರಾಜಕೀಯ ಹೇಳಿಕೆಯನ್ನು ಕೊಟ್ಟಿದ್ದೇನೆ ಹೊರತು ಯಾವುದೇ ವ್ಯಕ್ತಿಯ ಮೇಲಾಗಲಿ, ಅಥವಾ ನಮ್ಮ ಸರ್ಕಾರದ ಮೇಲಾಗಲಿ, ಅಥವಾ ನಮ್ಮ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳಿಗಾಗಲಿ ಇಲ್ಲಿ ಇರತಕ್ಕಂತಹ ಯಾವ ಸದನದ ಸದಸ್ಯರ ಬಗ್ಗೆಯಾಗಲಿ ನಾನು ಮಾತನಾಡಿಲ್ಲ. ಆದ್ದರಿಂದ ನಿಯಮಾವಳಿ ಪ್ರಕಾರ ಯಾವುದೇ ಸಂದರ್ಭದಲ್ಲಿ ಕೂಡ ಇದು ಚರ್ಚೆಗೆ ಬರುವುದಕ್ಕೆ ಅವಕಾಶ ಇಲ್ಲ. ದಯವಿಟ್ಟು ಅಂಥದ್ದು ಏನಾದರೂ ನಡೆದಿದ್ದರೂ ಕೂಡ ಇದರ ಬಗ್ಗೆ ಚರ್ಚೆಗೆ ಅವಕಾಶ ಇರಬಹುದು. ಇದು ಒಂದೇ ಅಲ್ಲ ಬಹಿರಂಗವಾಗಿ ಆಚೆ ಅನೇಕ ರಾಜಕೀಯ ಒತ್ತಡಗಳಲ್ಲಿ ತಾವೂ ಕೂಡ ಮಾತನಾಡಿರುತ್ತೀರಿ. ನಾನು ಮಾತನಾಡಿರುತ್ತೇನೆ. ಎಲ್ಲರೂ ಮಾತನಾಡತಕ್ಕಂಥದ್ದು ಸಹಜ. ಆದ್ದರಿಂದ ಈ ಹೇಳಿಕೆ ಓದುತೇನೆ ಇದು ಒಂದು ರಾಜಕೀಯ ಪಕ್ಷದ ಹೇಳಿಕೆ ಆಗಿರುವುದೇ ಹೊರತು ಅದನ್ನು ಇಲ್ಲಿಗೆ ಸಮಾಧಾನ ಮಾಡಿ ಸದನ ನಡೆಸುವುದಕ್ಕೆ ತಾವೆಲ್ಲಾ ಅನುಮತಿ ಕೊಡಬೇಕೆಂದು ತಮ್ಮ ಮೂಲಕ ಕೋರಿಕೊಳ್ಳ ಬಯಸುತ್ತೇನೆ.

**ಅಧ್ಯಕ್ಷರು :-** ಯಡಿಯೂರಪ್ಪನವರೇ, ಮಾನ್ಯ ಪ್ರಕಾಶ್ ಹುಕ್ಕೇರಿ, ಕೃಷಿ ಮಾರುಕಟ್ಟೆ ಸಚಿವರು ಗೌರವಾರ್ಥ ಭೋಜನ ಕೂಟವನು ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಿದ್ದಾರೆ.

**ಶ್ರೀ ಬಿ.ಎಸ್. ಯಡಿಯೂರಪ್ಪ :-** ಮಾನ್ಯ ಅಧ್ಯಕ್ಷರೆ, ನಾನು ನಿರೀಕ್ಷೆ ಮಾಡಿದ್ದೆ, ಕೊನೇ ಪಕ್ಷ ರೇವಣ್ಣನವರು ಸ್ವಾಭಿಮಾನಕ್ಕೆ ದಕ್ಕೆ ಬರುವುದು ಎಂದೂ ಅವರು ಸಹಿಸುವವರೇ ಅಲ್ಲ, ಇಂತಹ ಸಂದರ್ಭದಲ್ಲಿ ನನ್ನ ಬಗ್ಗೆ ವಿನಾ ಕಾರಣ ಆರೋಪ ಮಾಡಿದ್ದಾರೆ. ಎಲಕ್ಟ್ರಾನಿಕ್ ಮೀಡಿಯಾ ಇದೆ, ಸಾಕ್ಷ್ಯಾಧಾರಗಳು ಇವೆ, ನಾನು ಒಂದು ಕ್ಷಣ ಮಂತ್ರಿಯಾಗಿ ಮುಂದುವರಿಯು ವುದಿಲ್ಲವೆಂದು ಹೇಳುತ್ತಾರೆಂದು ನಾನು ಅಂದುಕೊಂಡಿದ್ದೆ. ಮಾನ್ಯ ಶ್ರೀನಿವಾಸರವರು 40-50 ಜನ ಜೈಲಿಗೆ ಹೋಗುವವರು ಇಲ್ಲಿ ಇದ್ದಾರೆ ಎಂದು ನೀವು ಹೇಳಿಕೆಯನ್ನು ಕೊಟ್ಟಿದ್ದೀರಿ. ಈ ಹೇಳಿಕೆ ಕೊಟ್ಟು ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಬಂದಿದೆ. ಈ ರೀತಿ ಹೇಳಿಕೆ ಕೊಡುತ್ತಿದ್ದೀರಿ. ಇದು ಸಾಧು ಅಲ್ಲ. ಯಾರಿಗೂ ಶೋಭೆ ತರುವುದು ಇಲ್ಲ. ಒಬ್ಬ ಜವಾಬ್ದಾರಿಯುತ ಕ್ಯಾಬಿನೆಟ್ ಸಚಿವರು ನಡೆದುಕೊಳ್ಳುವ ರೀತಿ ಇದು ಅಲ್ಲ. ಇದನ್ನು ಖಂಡನೆ ಮಾಡಿ ನಾವು ವಾಕ್‌ಔಟ್ ಮಾಡುತ್ತೇವೆ. ನೀವು ಹೇಗೆ ಬೇಕಾದರೂ ಮಾಡಿ.

(ಈ ಸಂದರ್ಭದಲ್ಲಿ ಭಾರತೀಯ ಜನತಾಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

**ಅಧ್ಯಕ್ಷರು :-** ಸದನವು ಈಗ ಮುಕ್ತಾಯವಾಗಿ ಮತ್ತೆ 2.30 ಗಂಟೆಗೆ ಸೇರಲಿದೆ.

(ಸದನವು 1.20ಕ್ಕೆ ಮುಕ್ತಾಯವಾಗಿ ಮತ್ತೆ ಪುನಃ 2.30ಕ್ಕೆ ಸೇರಲು ನಿಶ್ಚಯಿಸಿತು.)

(ಸದನವು 1.00 ಗಂಟೆ 20 ನಿಮಿಷಕ್ಕೆ ಮುಕ್ತಾಯವಾಗಿ ಪುನಃ 2.20 ಗಂಟೆ 30.00 ನಿಮಿಷಕ್ಕೆ ಸೇರಲು ನಿರ್ಧರಿಸಿತು.)

(ಮತ್ತೆ ಸಭೆಯು ಭೋಜನದ ನಂತರ ಮಧ್ಯಾಹ್ನ 2.50 ಗಂಟೆಗೆ ಸಮಾವೇಶಗೊಂಡಿತು, ಮಾನ್ಯ ಸಭಾಧ್ಯಕ್ಷರು, ಅಧ್ಯಕ್ಷ ಪೀಠವನ್ನಲಂಕರಿಸಿ ದರು)